**ಓ ಎಸ್ ನಂಃ 144-14**
**ಡಿ ಡಬ್ಲ್ಯೂ ಃ 6**

**ದಿಃ 25-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

14. ಬ್ಯಾಲಕೆರೆ ಆಸ್ತಿಯನ್ನು ನಾನು ಮತ್ತು ನನ್ನ ಕುಟುಂಬದವರು ಸೇರಿ ಕ್ರಯ ಮಾಡಿಕೊಟ್ಟಿರುತ್ತೇವೆ. ನಾವು ಸದರಿ ಆಸ್ತಿಯನ್ನು ಯಾವ ಕಾರಣಕ್ಕಾಗಿ ಕ್ರಯ ಮಾಡಿಕೊಟ್ಟಿರುತ್ತೇವೆ ಅದನ್ನು ಕ್ರಯಪತ್ರದಲ್ಲಿ ನಮೂದು ಮಾಡಲಾಗಿದೆ. ಸಾಕ್ಷಿ ಮುಂದುವರೆದು ನನ್ನ ತಂಗಿಯ ಮದುವೆಗಾಗಿ ಕ್ರಯ ಮಾಡಲಾಗಿದೆ ಎಂದು ಹೇಳುತ್ತಾರೆ. ನನ್ನ ಅಜ್ಜ ಶಿವರುದ್ರಯ್ಯರವರು ಮೃತ್ಯುಪತ್ರ ಮಾಡಿರುವುದು ಈ ನ್ಯಾಯಾಲಯದಲ್ಲಿ ಕರಿಬಸವಯ್ಯರವರು ವಕಾಲತ್ ನ್ನು ಹಾಕಿಸಿದ 2 ವರ್ಷಗಳ ನಂತರ ಗೊತ್ತಾಗಿರುತ್ತದೆ. ಈ ಮೊದಲು ಸಲ್ಲಿಸಿದ ನನ್ನ ಪ್ರತಿವಾದ ಪತ್ರದ ವಿಷಯ ನನಗೆ ಗೊತ್ತಿರಲಿಲ್ಲ 6 ನೇ ಪ್ರತಿವಾದಿ ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದು ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನನ್ನ ಅಜ್ಜನ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ನನ್ನ ತಂದೆಯ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ಅಜ್ಜ ಆಸ್ತಿಗಳನ್ನು ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೊದಲು ಸಲ್ಲಿಸಿದ ಮೃತ್ಯುಪತ್ರದ ವಿಷಯ ನನಗೆ ಗೊತ್ತಿಲ್ಲ ಅದನ್ನು 6 ನೇ ಪ್ರತಿವಾದಿಯೇ ನಮ್ಮನ್ನು ಹೆದರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರ. ನನ್ನ ಹೆಸರಿಗೆ ಶಿವರುದ್ರಯ್ಯರವರು ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳುವ ದಾಖಲೆ ಕರಿಬಸವಯ್ಯರವರ ಕಡೆ ಇತ್ತು. ನನ್ನ ಹೆಸರಿಗೆ ಆದ ಮೃತ್ಯುಪತ್ರವನ್ನು ನಾನು ಓದಿಲ್ಲ ಕಾರಣ 6 ನೇ ಪ್ರತಿವಾದಿ ಓದಲು ಬಿಡಲಿಲ್ಲ. ನನ್ನ ಅಜ್ಜ ಶಿವರುದ್ರಯ್ಯ ಯಾವುದೇ ಮೃತ್ಯುಪತ್ರವನ್ನು ಮಾಡಿಲ್ಲ ಎಂದರೆ ನಾನು ಮತ್ತು ನನ್ನ ತಾಯಿ ಶಿವರುದ್ರಯ್ಯರವರನ್ನು ನೋಡಲು ಆಸ್ಪತ್ರೆಗೆ ಹೋದಾಗ ತಾವು ಸಿದ್ದಯ್ಯ ಮತ್ತು ದಳ್ಳಾಳಿ ರಂಗಯ್ಯ ರವರನ್ನು ಸಾಕ್ಷಿದಾರರನ್ನಾಗಿ ಮಾಡಿ ನಮಗೆ ಮೃತ್ಯುಪತ್ರ ಮಾಡಿಕೊಟ್ಟಿರುವುದಾಗಿ ಹೇಳಿರುತ್ತಾರೆ ಮತ್ತು ನಮಗೆ ಅನ್ಯಾಯ ಮಾಡಿಲ್ಲ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಸದರಿ ಮೃತ್ಯುಪತ್ರದಲ್ಲಿ ಸರ್ವೆ ನಂ 2 ರಲ್ಲಿ 1 ಎಕರೆ 6 ಗುಂಟೆ, ಸರ್ವೆ ನಂ 55/1 ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ 56/1 ರಲ್ಲಿ 21 ಗುಂಟೆ, ಸರ್ವೆ ನಂ 67/9 ರಲ್ಲಿ 6 ಗುಂಟೆ ಮತ್ತು ಸರ್ವೆ ನಂ 56/6 ಬಿ ರಲ್ಲಿ 10 ಗುಂಟೆ ಜಮೀನುಗಳ ಬಗ್ಗೆ ಬರೆಯಲಾಗಿದೆ. ನನ್ನ ಹೆಸರಿಗೆ ನನ್ನ ಅಜ್ಜ ಮೃತ್ಯುಪತ್ರ ಮಾಡಿದ್ದು ನನಗೆ ಮೊದಲೇ ಗೊತ್ತಿತ್ತು ಎಂದರೆ ಅವರನ್ನು ಆಸ್ಪತ್ರೆಗೆ ನೋಡಲು ಹೋದಾಗ

ಗೊತ್ತಾಗಿದ್ದು ಎಂದು ಹೇಳುತ್ತಾರೆ.

15. ನಾನು ಮತ್ತು ವಾದಿಗಳು ಮೊದಲು ಅನ್ಯೋನ್ಯವಾಗಿದ್ದು ಈಗ ಸಂಬಂಧ ಸರಿಯಿರುವುದಿಲ್ಲ. ನಾನು ಬೇರೆ ಪ್ರತಿವಾದಿಗಳ ಜೊತೆ ಶಾಮೀಲಾಗಿ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಮೃತ್ಯುಪತ್ರವನ್ನು ಹಾಜರುಮಾಡಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಶಿವರುದ್ರಯ್ಯರವರಿಗೆ ವ್ಯಾಪಾರ ಇದ್ದು ಅವರ ಸ್ವಂತ ಸ್ವಂತ ಸಂಪಾದನೆಯಿಂದ ಪಿತ್ರಾರ್ಜಿತ ಆಸ್ತಿಗಳ ಜೊತೆಗೆ ತಮ್ಮ ಸ್ವಾಯಾರ್ಜಿತ ಆಸ್ತಿಗಳನ್ನು ಸಂಪಾದನೆ ಮಾಡಿದ್ದರು ಎಂದರೆ ನನ್ನ ಅಜ್ಜನಿಗೆ ಅಂಗಡಿ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಹಣದಿಂದ ನನ್ನ ಅಜ್ಜ ಯಾವುದೇ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. 14ನೇ ದಾವಾ ಆಸ್ತಿಯನ್ನು ಮಾರಾಟ ಮಾಡಲು ಶಿವರುದ್ರಯ್ಯರವರು 1, 5 ಮತ್ತು 6ನೇ ಪ್ರತಿವಾದಿಗಳಿಗೆ ಅಧಿಕಾರ ಕೊಟ್ಟಿರಲಿಲ್ಲ ಎಂದರೆ ಆ ಸಮಯದಲ್ಲಿ ಗೌರಮ್ಮರವರ ಮದುವೆಯಾಗಿರಲಿಲ್ಲ ಅವರ ಮದುವೆಗಾಗಿ ಮಾರಾಟ ಮಾಡಬಹುದು ಎಂಬುದಾಗಿ ಶಿವರುದ್ರಯ್ಯರವರು ಹೇಳಿದ್ದರು.

**1ನೇ ವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಗಿದೆ.**

**2, 5, 6 ಮತ್ತು 7ನೇ ಪ್ರತಿವಾದಿಗಳು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**